ಆ) 2006-07ರ ಸಾಲಿನಲ್ಲಿ ಯಾವುದೇ ಹೊಸ ಕೋರ್ಸುಗಳನ್ನು ಪ್ರಾರಂಭಿಸಿರುವುದಿಲ್ಲ.

ಇ) ಈ ವಿಶ್ವವಿದ್ಯಾಲಯದ ಕಾರ್ಯವ್ಯಾಪ್ತಿ 12 ಜಿಲ್ಲೆಗಳಲ್ಲಿ ಇರುತ್ತದೆ. 1. ಬಿಜಾಪುರ, 2. ಬಾಗಲಕೋಟೆ, 3. ಬೆಳಗಾವಿ, 4. ಧಾರವಾಡ, 5. ಉ.ಕನ್ನಡ, 6. ಗದಗ, 7. ಹಾವೇರಿ, 8. ಕೊಪ್ಪಳ, 9. ಬಳ್ಳಾರಿ, 10. ರಾಯಚೂರು, 11. ಗುಲ್ಬರ್ಗಾ ಮತ್ತು 12. ಬೀದರ್.

ಈ) ಇಲ್ಲ.

ಉ) ವಿಶ್ವವಿದ್ಯಾಲಯದಿಂದ ಪ್ರಸ್ತಾವನೆ ಬಂದಲ್ಲಿ ಪರಿಶೀಲಿಸಲಾಗುವುದು.

1029 (1225) ಶ್ರೀ ಚನ್ನಬಸವರಾಜ್ (ಅಪ್ಪಾಜಿ) ಶಂಕರರಾವ್ ನಾಡಗೌಡ (ಮುದ್ದೇಬಿಹಾಳ) :- ಮಾನ್ಯ ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

ಅ) ರಾಜ್ಯದಲ್ಲಿ ತಾತ್ಕಾಲಿಕವಾಗಿ ಕುಡಿಯುವ ನೀರಿನ ಸಮಸ್ಯೆಗಳನ್ನು ಪರಿಹರಿಸಲು ಕಾರ್ಯಗತಗೊಳಿಸುತ್ತಿರುವ ಜಲನಿರ್ಮಲ ಯೋಜನೆಗಳೆಷ್ಟು ;

ಆ) ಮುದ್ದೇಬಿಹಾಳ ತಾಲ್ಲೂಕಿನಲ್ಲಿ ಈ ಯೋಜನೆಯಡಿಯಲ್ಲಿ ಕೈಗೊಂಡ ಕಾರ್ಯಕ್ರಮಗಳೇನು ;

ಇ) ಮುದ್ದೇಬಿಹಾಳ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಕೋರಿ ಬಂದ ಪ್ರಸ್ತಾವನೆಗಳೆಷ್ಟು ;

ಈ) ಸರ್ಕಾರ ಈ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಕೈಗೊಂಡ ಕ್ರಮಗಳೇನು?

ಶ್ರೀ ಎಸ್.ಎ. ರವೀಂದ್ರನಾಥ್ (ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು):-

ಅ) ಜಲ ನಿರ್ಮಲ ಯೋಜನೆಯು ವಿಶ್ವಬ್ಯಾಂಕ್ ನೆರವಿನ ಯೋಜನೆಯಾಗಿದ್ದು, ಇದರಲ್ಲಿ ಕುಡಿಯುವ ನೀರು ಯೋಜನೆಯನ್ನು ಬೇಡಿಕೆ ಆಧಾರದ ಮೇಲೆ ನೀರಿನ ಗುಣಮಟ್ಟ ತೊಂದರೆಯಿರುವ ಗ್ರಾಮಗಳಲ್ಲಿ ತೆಗೆದುಕೊಳ್ಳಲಾಗಿದೆ. ಈ ಯೋಜನೆಯನ್ನು ರಾಜ್ಯದ ಉತ್ತರ ಕರ್ನಾಟಕದ 11 ಜಿಲ್ಲೆಗಳಾದ ಬಾಗಲಕೋಟೆ, ಬೆಳಗಾಂ, ಬೀದರ್, ಬಿಜಾಪುರ, ಧಾರವಾಡ, ಗದಗ, ಗುಲ್ಬರ್ಗಾ, ಹಾವೇರಿ, ಕೊಪ್ಪಳ, ರಾಯಚೂರು ಮತ್ತು

ಉತ್ತರ ಕನ್ನಡ ಜಿಲ್ಲೆಗಳ 744 ಗ್ರಾಮ ಪಂಚಾಯಿತಿಗಳ 3064 ಗ್ರಾಮ/ಜನವಸತಿಗಳಲ್ಲಿ ಅನುಷ್ಠಾನಗೊಳಿಸಲಗುತ್ತಿದೆ.

ಆ) ಮುದ್ದೇಬಿಹಾಳ ತಾಲ್ಲೂಕಿನಲ್ಲಿ ಮೊದಲನೇ ಹಂತದಲ್ಲಿ 21 ಕುಡಿಯುವ ನೀರು ಸರಬರಾಜು ಯೋಜನೆಗಳನ್ನು, ಮೂರನೇ ಹಂತದಲ್ಲಿ 19 ಕುಡಿಯುವ ನೀರು ಸರಬರಾಜು ಯೋಜನೆಗಳನ್ನು ಹಾಗು ಅಡವಿಸೋಮನಾಳ್ ಮತ್ತು ಇತರೆ 30 ಗ್ರಾಮಗಳಲ್ಲಿ 1 ಬಹು ಗ್ರಾಮ ನೀರು ಸರಬರಾಜು ಯೋಜನೆಯನ್ನು ಈ ಯೋಜನೆಯಡಿ ತೆಗೆದುಕೊಳ್ಳಲಾಗಿದೆ.

ಇ) ಜಲ ನಿರ್ಮಲ ಯೋಜನೆಯಡಿ ಮುದ್ದೇಬಿಹಾಳ ತಾಲ್ಲೂಕಿನಲ್ಲಿ 32 ಗ್ರಾಮ ಪಂಚಾಯಿತಿಗಳಿಂದ ಕುಡಿಯುವ ನೀರು ಸರಬರಾಜು ಯೋಜನೆಗಾಗಿ ಪ್ರಸ್ತಾವನೆಗಳು ಬಂದಿರುತ್ತವೆ. ಮುಂದುವರೆದು ಮಾರ್ಗಸೂಚಿಗಳನ್ವಯ 14 ಗ್ರಾಮ ಪಂಚಾಯಿತಿಗಳ 71 ಕುಡಿಯುವ ನೀರು ಸರಬರಾಜು ಯೋಜನೆಗಳನ್ನು ತೆಗದುಕೊಳ್ಳಲಾಗಿದೆ.

ಕೇಂದ್ರ ಪುರಸ್ಕೃತ ಸ್ವಜಲಧಾರ ಯೋಜನೆಯಡಿ 1 ಯೋಜನೆಯನ್ನು ತೆಗದುಕೊಳ್ಳಲಾಗಿದೆ.

ಮುದ್ದೇಬಿಹಾಳ ತಾಲ್ಲೂಕಿನಲ್ಲಿ 33 ಜನವಸತಿಗಳನ್ನು 2007–08ನೆ ಆರ್ಥಿಕ ವರ್ಷದಲ್ಲಿ ಬಿಜಾಪುರ ಜಿಲ್ಲಾ ಪಂಚಾಯತ್ ಕ್ರಿಯಾ ಯೋಜನೆಯಡಿಯಲ್ಲಿ ಅಳವಡಿಸಲಾಗಿದೆ. 83 ಜನವಸತಿಗಳನ್ನು ರಾಜೀವ್ ಗಾಂಧಿ ರಾಷ್ಟ್ರೀಯ ಕುಡಿಯುವ ನೀರು ಸಬ್ ಮಿಶನ್ ಕಾರ್ಯಕ್ರಮದಲ್ಲಿ ಅಳವಡಿಸಲು ಪ್ರಸ್ತಾಪಿಸಲಾಗಿದೆ.

ಈ) ಜಲ ನಿರ್ಮಲ ಯೋಜನೆಯಡಿ ಪ್ರಸ್ತುತ ಹಂತ–3ರ ಕುಡಿಯುವ ನೀರು ಸರಬರಾಜು ಯೋಜನೆ ಹಾಗೂ ಬಹು ಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಕಾಮಗಾರಿಗಳನ್ನು ಡಿಸೆಂಬರ್–2007ರೊಳಗೆ ಪೂರ್ಣಗೊಳಿಸಲು ಕ್ರಮಕೈಗೊಳ್ಳಲಾಗಿದೆ.

2007–08ನೇ ಸಾಲಿನ ರಾಜ್ಯ ವಲಯ, ಕೇಂದ್ರ ವಲಯ ಹಾಗೂ ಮರುಭೂಮಿ ಅಭಿವೃದ್ಧಿ ಯೋಜನೆಗಳಡಿಯಲ್ಲಿ 33 ಜನವಸತಿಗಳನ್ನು ಅಳವಡಿಸಲು ಕ್ರಮ ಕೈಗೊಳ್ಳಲಾಗಿದೆ. 83 ಜನವಸತಿಗಳಿಗೆ ಕುಡಿಯುವ ನೀರು ಸರಬರಾಜಿಗಾಗಿ 7 ಬಹು ಗ್ರಾಮ ಯೋಜನೆಗಳ ಪ್ರಸ್ತಾವನೆಗಳನ್ನು ರಾಜೀವ್ ಗಾಂಧಿ ರಾಷ್ಟ್ರೀಯ ಕುಡಿಯುವ ನೀರು ಸಬ್ ಮಿಶನ್ ಕಾರ್ಯಕ್ರಮದಲ್ಲಿ ತಯಾರಿಸಿದ್ದು, ಅನುಮೋದನೆಯ ವಿವಿಧ ಹಂತಗಳಲ್ಲಿವೆ.